ಶ್ರೀ ಕೆ. ಎಸ್. ಕಾಳಮುರಿಗೌಡ.—ಹೊಗೇಸೊಪ್ಪು ಕಮರ್ಷಿಯಲ್ ಕ್ರಾಪ್ ಆದ್ದರಿಂದ ಅದಕ್ಕೆ ಸಾಕಷ್ಟು ಸೌದೆಯನ್ನು ಒದಗಿಸಬೇಕಾಗುತ್ತದೆ. ಆದರೆ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಬ್ಲಾಕ್‌ನಲ್ಲಿ ಒಂದು ಲಾರಿ ಲೋಡಿಗೆ ೨ ಸಾವಿರ ೨ ಸಾವಿರದ ೨೦೦ ರೂಪಾಯಿನಲ್ಲಿ ಸರಬರಾಜಾಗುತ್ತಿದೆ. ಸರ್ಕಾರಿ ಡಿಪೋದಲ್ಲಿ ಒಂದು ಲಾರಿ ಲೋಡಿಗೆ ಸಾವಿರದ ಇನ್ನೂರು ಸಾವಿರದ ಮುನ್ನೂರು ರೂಪಾಯಿ ಬೆಲೆ ಇದೆ. ಆದ್ದರಿಂದ ಈ ಬಗ್ಗೆ ಕ್ರಮ ತೆಗೆದುಕೊಂಡು ಸರ್ಕಾರದ ವತಿಯಿಂದ ಬ್ಯಾರೆನ್ಸ್‌ಗೆ ಸಾಕಷ್ಟು ಸೌದೆಯನ್ನು ಒದಗಿಸುತ್ತೀರಾ ?

†ಶ್ರೀ ಜಿ. ರಾಮೇಗೌಡ,—ಸೌದೆ ವ್ಯಾಪಾರದಲ್ಲಿ ಬ್ಲಾಕ್ ಮಾರ್ಕೆಟ್ ನಡೆದಿದ್ದರೆ ಅದು ಅರಣ್ಯ ಇಲಾಖೆಯ ವತಿಯಿಂದ ನಡೆದಿಲ್ಲ. ಅಲ್ಲಿ ಬ್ಲಾಕ್ ಮಾರ್ಕೆಟ್ ಎಂಬ ಪ್ರಶ್ನೆಯೇ ಬರುವುದಿಲ್ಲ. ಏಕೆಂದರೆ ಇದರ ಮೇಲೆ ಕಂಟ್ರೋಲ್ ಇಲ್ಲ. ಒಟ್ಟಿನಲ್ಲಿ, ಸುಲಭ ಬೆಲೆಯಲ್ಲಿ ಕಾರ್ಪೊರೇಷನ್ ಮುಖಾಂತರ ಸೌದೆಯನ್ನು ಒದಗಿಸುವುದಕ್ಕೆ ಸರ್ವ ಪ್ರಯತ್ನವನ್ನು ಮಾಡುತ್ತೇನೆ. ಸೌದೆಗೆ ಕಡಿಮೆ ಬೆಲೆ ಇರುವುದರಿಂದ ಬಹಳಷ್ಟು ಬೇಡಿಕೆ ಇದೆಯಾಯ್ತು ಇದೆ, ಆದರೂ ಸಹ ಹೊಗೆಸೊಪ್ಪಿನ ಬೇಸಾಯಗಾರರಿಗೆ ಸಾಕಷ್ಟು ಸೌದೆಯನ್ನು ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಅಧ್ಯಕ್ಷರು:— ಈಗ ಪ್ರಶ್ನೋತ್ತರಗಳು ಮುಗಿದವು.

QUESTIONS FOR ANSWERS ON THE DAY

(but not taken up)

Move for abolition of Karnataka Slum Clearance Board.

301. SRI G. BASAVANAPPA (Holehonnur).—Will the Minister for Municipal Administration be pleased to state .—

(*a*) whether there is any move by the Goverment to abolish the statutory Karnataka Slum Clearance Board ;

(*b*) if so, the reasons for its abolition ?

SRI H. C. SRIKANTAIAH (Minister for Municipal Administration).—

(*a*) No

(*b*) Does not arise in view of reply to clause (a) above.

Basavana Bagewadi as Tourist Centre.

1009. SRI B.S. PATIL (Huvin-Hippargi).—Will the Minister for Transport and Tourism be pleased to state:—

(*a*) whether the Government has thought of declearing Basavana Bagewadi the birth place of Jagajyothi Basaveswara, as a tourist centre ;

(*b*) whether there is scheme before the Government to construct travellers bungalow by the tourism department for the benefit of thousands of tourist who visit the said place daily?

SRI R. GUNDU RAO (Minister for Transport and Tourism).–

(*a*) Basavanabagewadi the birth place of Sri Basaveswara has already been declared as tourist centre.

(*b*) No

Notice about Press Statement of Minister about Muslim Women and Purdah

ಶ್ರೀ ಸಿ.ಎಂ. ಇಬ್ರಾಹಿಂ (ಶಿವಾಜಿನಗರ).—ನಾನು ಕಳೆದ ಅಧಿವೇಶನದಲ್ಲಿ ರೂಲ್ ೩೧೨ರ ಕೆಳಗೆ ಒಂದು ನೋಟೀಸನ್ನು ಕೊಟ್ಟಿದ್ದೆ. ಅದು ಈ ಲಾಗಾಯ್ತು ಬರಲಿಲ್ಲ.

ಅಧ್ಯಕ್ಷರು.—ತಾವು ದಯವಿಟ್ಟು ಆ ಬಗ್ಗೆ ನನ್ನನ್ನು ನನ್ನ ಛೇಂಬರ್‌ನಲ್ಲಿ ಭೇಟಿ ಮಾಡಿ. ಈಗ ಇಲ್ಲಿ ಆ ಬಗ್ಗೆ ಪ್ರಸ್ತಾಪಿಸುವುದು ಬೇಡ.

ಶ್ರೀ ಸಿ ಎಂ. ಇಬ್ರಾಹಿಂ.—ಆ ಬಗ್ಗೆ ನಾನು ಈಗಾಗಲೇ ಈ ಸದನದಲ್ಲಿ ೨–೩ ಬಾರಿ ಕೇಳಿದ್ದೇನೆ. ಆದ್ದರಿಂದ ಅದನ್ನು ಇವತ್ತು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೋ ಇಲ್ಲವೋ ಎಂಬುದನ್ನು ಹೇಳ ಲೇಬೇಕು. ೪೫ ಲಕ್ಷ ಜನರ ಮೇಲೆ ಹೇಳಿಕೆಯನ್ನು ಮಾಡಿರಬೇಕಾದರೆ, ಆ ಬಗ್ಗೆ ನೋಟೀಸ್ ಕೊಟ್ಟು ೧೫ ದಿನಗಳಾದರೂ ಕೂಡ ಅಲ್ಲಿ ಇಲ್ಲಿ ಬಂದು ನೋಡಿ ಎಂದರೆ ಹೇಗೆ ಸಾಧ್ಯ ? ಇವತ್ತು ಮಾನ್ಯ ರಂಗ ನಾಥ್‌ರವರು ಕೂಡ ಇದ್ದಾರೆ. ಮಾನ್ಯ ಹಾವನೂರ್‌ರವರು ಮುಸ್ಲಿಂ ಹೆಣ್ಣು ಮಕ್ಕಳ ಬಗ್ಗೆ, ಮುಸ್ಲಿಂ ಧರ್ಮದಲ್ಲಿ ಹೆಣ್ಣು ಮಕ್ಕಳಿಗೆ ಇರತಕ್ಕ ಸ್ಥಾನಮಾನದ ಬಗ್ಗೆ, ಧರ್ಮಕ್ಕೆ ಚ್ಯುತಿ ಬರತಕ್ಕ ರೀತಿಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಬಗ್ಗೆ ನಾನು ನೋಟೀಸ್ ಕೊಟ್ಟು ೧೫ ದಿವಸವಾಗಿರುವುದರ ಜೊತೆಗೆ ನಾನು ಈಗ ಕೇಳುತ್ತಿರುವುದು ಇದು ಮೂರನೆಯ ಸಲ. We will protest the statement of the concerned Minister. It is our right.

SRI QAMARUL ISLAM. – We want to know whether it is the policy of this Government or it is the personal view of the Minister concerned...

MR. SPEAKER.—I request the hon'ble Members to contact me in my Chamber. I will hear their grievances.

ಶ್ರೀ ಸಿ.ಎಂ. ಇಬ್ರಾಹಿಂ,—ಮಾನ್ಯ ಹಾವನೂರ್‌ರವರು ಇದ್ದಾಗ ತರೋಣವೆಂದರೆ ಅವರು ಈ ಸದನಕ್ಕೆ ಬರುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡುತ್ತಿದ್ದಾರೆ ಅದು ಅಜೆಂಡಾದಲ್ಲಿ ಬಂದಿಲ್ಲ ಮತ್ತು ನನ್ನ ಗಮನಕ್ಕೂ ಕೂಡ ಬಂದಿಲ್ಲ. ಮತ್ತು ಮಾನ್ಯ ಮಂತ್ರಿಗಳಿಗೆ ಆರೋಗ್ಯ ಚೆನ್ನಾಗಿಲ್ಲದಿರುವ ಕಾರಣ ಸಭೆಗೆ ಬರುತ್ತಿಲ್ಲ. ಅದನ್ನು ನಾನು ತರಿಸಿ ನೋಡುತ್ತೇನೆ. ಮಾನ್ಯ ಗುಲ್ಬರ್ಗದ ಸದಸ್ಯರು ಕೇಳುತ್ತಿದ್ದರು, ಇದು ಸರ್ಕಾರದ ನೀತಿಯೇ ಎಂದು; ಇದು ಸರ್ಕಾರದ ನೀತಿ ಅಲ್ಲ ಎಂಬುದನ್ನು ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ. ಈಗ ಯಾವ ವಿಚಾರವನ್ನು ಪ್ರಸ್ತಾಪಿಸಿ ದ್ದಾರೋ ಅದನ್ನು ನಾನು ತರಿಸಿನೋಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಂತ್ರಿಗಳು ಹೇಳಿಕೆಗಳನ್ನು ಕೊಡಲಿಕ್ಕೆ ಸಂಪೂರ್ಣವಾದ ಅಧಿ ಕಾರ ಇದೆ. ಅವರಲ್ಲಿ ವೈಯಕ್ತಿಕ ಅಭಿಪ್ರಾಯ ಏನು ಇದೆ. ಸರ್ಕಾರದ ಅಭಿಪ್ರಾಯ ಏನು ಇದೆ. ಅದನ್ನು ಈಗ ಸ್ಪಷ್ಟ ಮಾಡತಕ್ಕುದ್ದು ಅವಶ್ಯಕವಾಗಿದೆ. ಇದೇ ರೀತಿ ಕೆಲವು ನೋಟೀಸ್‌ಗಳನ್ನು ಕೊಟ್ಟಿದ್ದೇವೆ. ಮಂತ್ರಿಗಳು ಕೂಡ ಸ್ಟೇಟ್‌ಮೆಂಟನ್ನು ಮಾಡುತ್ತಿದ್ದಾರೆ. ಅನೇಕರು ಜನತಾ ಪಕ್ಷದ ಬಗ್ಗೆ ಮಾತನಾಡುತ್ತಿದ್ದಾರೆ; ಅದು ಬಂದು ನೋಟೀಸ್ ಇದೆ. ಇದೇ ರೀತಿ ವೀರಶೈವರ ಬಗ್ಗೆ, ಐಯ್ಯಂಗಾರರ ಬಗ್ಗೆ ಹಾಗೂ ರಾಜಕೀಯ ಪಕ್ಷಗಳ ಬಗ್ಗೆ ಹೇಳಿದ್ದಾರೆ. ಹೇಳಿಕೊಳ್ಳಲಿ, ಅವು ಅವರ ಸ್ವಾತಂತ್ರ್ಯ. ಮಂತ್ರಿಗಳು ಆ ಸ್ಥಾನಮಾನದಿಂದ ಹೇಳುವುದು ಬೇರೆ ಮತ್ತು ವೈಯಕ್ತಿವಾಗಿ ಹೇಳು ವುದು ಬೇರೆ. ಈಗತಾನೆ ಮಾನ್ಯ ಮಂತ್ರಿಗಳು ಹೇಳಿದರು, ಅದು ಸರ್ಕಾರದ ನೀತಿ ಅಲ್ಲ ಎಂದು.